ಕರ್ನಾಟಕ ಸರ್ಕಾರ

**GOVERNMENT OF KARNATAKA**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆ ಮುಖ್ಯಸ್ಥರು)ರವರ ಕಛೇರಿ
Office of
Principal Chief Conservator of
Forests
(Head of Forest Force)

ಅರಣ್ಯ ಭವನ, 18 ನೇ ಅಡ್ಡರಸ್ತೆ,
ಮಲ್ಲೇಶ್ವರಂ, ಬೆಂಗಳೂರು- 560003.
Aranya Bhavan, 18th Cross
Malleshwaram, Bengaluru-560 003
Telephone : 080 2334 6472
Email : apccffc@gmail.com

Old File No. A5(3).GFL.CR-2/2018-19
E-Office File No. KFD/HOFF/A5-3(GFL)/7/2018-FC-KFD

**E-63650**
ದಿನಾಂಕ: 19-12-2019
**EDS Query**
**URGENT**

ಇವರಿಗೆ,

ಅರಣ್ಯ ಸಂರಕ್ಷಣಾಧಿಕಾರಿ,
ಮೈಸೂರು ವೃತ್ತ, ಮೈಸೂರು

ವಿಷಯ: Diversion of 0.977 hectare of forest land in selected survey numbers of Yelekoppa, Halalu, Yadavanahalli, Kabbanakere, Yellekoppa & Vaderahalli villages in Belluru hobli, Nagamangala taluk, Mandya district to establish Water Tank, Pipeline & Service road for providing drinking water supply to Adhichuchangiri and 128 other habitations in Nagamangala taluk of Mandya district in favour of Executive Engineer, Rural Drinking Water and Sanitation Department, Division Office, Bannur Road, Mandya.
**Proposal No. FP/KA/WATER/34491/2018**

ಉಲ್ಲೇಖ:
1. ಈ ಕಛೇರಿಯ ಇದೇ ಸಂಖ್ಯೆ ಪತ್ರ ದಿನಾಂಕ 14-05-2019 *[ಸ್ಟೇಜ್ – 1 ಪ್ರಸ್ತಾವನೆ]* ಹಾಗೂ ದಿನಾಂಕ 26-09-2019 *[ರಾಜ್ಯ ಸರ್ಕಾರವು ಕೋರಿರುವ ಹೆಚ್ಚುವರಿ ಮಾಹಿತಿ ಸಲ್ಲಿಸುವುದಕ್ಕೆ]*
2. ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ ಎಫ್.ಇ.ಇ 02 ಎಫ್.ಎಲ್.ಎಲ್ 2019 ದಿನಾಂಕ 10-07-2019 *[ಹೆಚ್ಚುವರಿ ಮಾಹಿತಿ ಕೋರಿರುವುದು]*
3. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಬನ್ನೂರು ರಸ್ತೆ, ಮಂಡ್ಯ ಇವರ ಪತ್ರ ಸಂಖ್ಯೆ ಕಾಇಂ:ಗ್ರಾಕುನೀಪಿನೈ.ವಿ:ಮಂಡ್ಯ:ಬ/ ಗ್ರಾ.ಯೋ: 2019-20/959 ರ ದಿನಾಂಕ 15-10-2019 *[ರಾಜ್ಯ ಸರ್ಕಾರವು ಕೋರಿರುವ ಮಾಹಿತಿಯನ್ನು ಸಲ್ಲಿಸಿರುವುದು]*
4. ಉಪ ಅರಣ್ಯ ಸಂರಕ್ಷಣಾಧಿಕಾರಿ , ಮಂಡ್ಯ ವಿಭಾಗ ಇವರ ಪತ್ರ ಸಂಖ್ಯೆ ಸಿ1/ಭೂಮಿ/ಎಫ್.ಸಿ/ಎಲ್ಲೇಕೊಪ್ಪ/ಸಿಆರ್-49/2018-19/679 ದಿನಾಂಕ 21-10-2019 *[ಉಪಯೋಗಿ ಸಂಸ್ಥೆಯು ನೀಡಿರುವ ಪತ್ರವನ್ನು ನೇರವಾಗಿ ಈ ಕಛೇರಿಗೆ ಸಲ್ಲಿಸಿರುವುದು]*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ದಿನಾಂಕ 14-05-2019 ರ ಈ ಕಛೇರಿಯ ಪತ್ರದಲ್ಲಿ 1980 ರ ಅರಣ್ಯ ಸಂರಕ್ಷಣೆ ಕಾಯ್ದೆ ಅಡಿಯಲ್ಲಿ ಸ್ಟೇಜ್ – *1* ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಮೂರು ಅಂಶಗಳಿಗೆ ಮಾಹಿತಿಯನ್ನು ಒಳಗೊಂಡಂತೆ ವರದಿಯನ್ನು ಸಲ್ಲಿಸಲು ರಾಜ್ಯ ಸರ್ಕಾರವು ಉಲ್ಲೇಖ (2) ರ ಪತ್ರದಲ್ಲಿ ನಿರ್ದೇಶನ ನೀಡಿರುತ್ತದೆ. ರಾಜ್ಯ ಸರ್ಕಾರದ ಪತ್ರದಲ್ಲಿನ ಕ್ರಮ ಸಂಖ್ಯೆ 2 ಕ್ಕೆ ಸಂಬಂಧಿಸಿದ ಮಾಹಿತಿಯನ್ನು ದಾಖಲೆಗಳೊಂದಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಡ್ಯ ವಿಭಾಗ ಇವರ ಮೂಲಕ ಈ ಕಛೇರಿಗೆ ಸಲ್ಲಿಸಲು ಉಲ್ಲೇಖ (1)ರ ದಿನಾಂಕ 26-09-2019 ರ ಈ ಕಛೇರಿಯ ಪತ್ರದಲ್ಲಿ ಉಪಯೋಗಿ ಸಂಸ್ಥೆಗೆ ತಿಳಿಸಲಾಗಿತ್ತು.

ಇದಕ್ಕೆ ಉತ್ತರವಾಗಿ, ಉಪಯೋಗಿ ಸಂಸ್ಥೆಯು ಉಲ್ಲೇಖ 3 ರ ಪತ್ರದಲ್ಲಿ ಸ್ಥಳದ ಐದು (5) ನಕಾಶೆಗಳನ್ನು ಅಡಕಗೊಳಿಸಿ, ಪ್ರತಿಯೊಂದು ನಕಾಶೆಯಲ್ಲಿ '*We have examined for the alternate alignment to avoid the forest land. But, there is no alternative pipe line alignment as shown in the map'* ಎಂದು ಸಾಮಾನ್ಯ ಷರಾವನ್ನು ನಮೂದಿಸಿರುತ್ತದೆ.

ಉಪಯೋಗಿ ಸಂಸ್ಥೆಯ ಉತ್ತರವನ್ನು ಭೌತಿಕವಾಗಿ ಪರಿಶೀಲಿಸದೇ, ವಾಸ್ತವಾಂಶಗಳ ಬಗ್ಗೆ ದೃಢೀಕರಣ ವರದಿಯನ್ನು ನೀಡದೇ ಉಪಯೋಗಿ ಸಂಸ್ಥೆಯ ಪತ್ರವನ್ನು ಯಥಾವತ್ತಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಡ್ಯ ವಿಭಾಗ ಇವರು ಉಲ್ಲೇಖ (4)ರ ಪತ್ರದಲ್ಲಿ ಸ್ಪಷ್ಟ ಅಭಿಪ್ರಾಯ ನೀಡದೇ ನೇರವಾಗಿ ಈ ಕಛೇರಿಗೆ ಸಲ್ಲಿಸಿರುತ್ತಾರೆ. ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಡ್ಯ ವಿಭಾಗ ಇವರ ಪತ್ರವನ್ನು ಸ್ಕ್ಯಾನ್ ಮಾಡಿ ಯಥಾವತ್ತಾಗಿ ನಿಮ್ಮ ಸ್ಪಷ್ಟ ಅಭಿಪ್ರಾಯ ನೀಡದೇ ದಿನಾಂಕ 05-11-2019 ರಂದು ಎಫ್.ಸಿ. ವೆಬ್ ಪೋರ್ಟಲ್ ಮೂಲಕ ಈ ಕಛೇರಿಗೆ ಸಲ್ಲಿಸಿರುತ್ತೀರಿ. ಇದು ಸಮಂಜಸವಾಗಿರುವುದಿಲ್ಲ ಮತ್ತು ಇಂತಹ ಅಸಮಂಜಸ ಮಾಹಿತಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲು ಸಾಧ್ಯವಿರುವುದಿಲ್ಲ.

ಆದುದರಿಂದ, ಉಪಯೋಗಿ ಸಂಸ್ಥೆಯವರು ನೀಡಿರುವ ಐದು (5) ನಕಾಶೆಗಳಲ್ಲಿ ನಮೂದಿಸಿರುವ ಷರಾವನ್ನು ಭೌತಿಕವಾಗಿ ಪರಿಶೀಲಿಸಿ, ವಾಸ್ತವಾಂಶಗಳ ಬಗ್ಗೆ ದೃಢೀಕರಣ ವರದಿಯನ್ನು ನಿಮ್ಮ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಸ್ಪಷ್ಟ ಅಭಿಪ್ರಾಯಗಳೊಂದಿಗೆ ಈ ಕಛೇರಿಗೆ ಎಫ್.ಸಿ. ವೆಬ್ ಪೋರ್ಟಲ್ ಮೂಲಕ ಶೀಘ್ರವೇ ಸಲ್ಲಿಸುವುದು.

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ, (ಅಸಂಕಾ)

ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಡ್ಯ ವಿಭಾಗ ಇವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಪ್ರತಿಯನ್ನು ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬನ್ನೂರು ರಸ್ತೆ, ಮಂಡ್ಯ – 571 401 ಇವರ ಮಾಹಿತಿಗೆ ಕಳುಹಿಸಿದೆ.